Sri D. DEVARAJ URS.—There are now about 195 persons involved but I am sorry to say that I am unable to answer in which case 10 persons are involved, in which case 20 persons are involved and in which case two persons are involved.

Sri B. B. SAYANAK.—In how many cases these 10 persons were convicted and 29 persons acquitted and what are the sentences on them ?

Sri D. DEVARAJ URS.—While tabling the question, instead of keeping back these supplementaries, if he had asked them I could have very well answered them.

Sri J. P. SARWESH.—Which district stands first in murder cases ?

Sri D. DEVARAJ URS.—That goes without saying; the district to which this question pertains is that district.

Sri B. B. SAYANAK.—Do not these 93 cases show the inefficiency of the Police Department ?

Sri D. DEVARAJ URS.—So, to show that we are efficient we should reduce this number by not putting up cases at all.

Levy of Water rate in Malnad

550. **Sri KONANDUR LINGAPPA** (Thirthahalli).—

Will the Minister of State for Major Irrigation be pleased to state :—

the reasons for levying water rates in Malnad ?

Sri H. N. NANJE GOWDA (Minister of State for Major Irrigation).—

The tax called Water Rate is levied throughout the state. This is not levied only in Malnad.

ಶ್ರೀ ಕೋಣಂದೂರು ಲಿಂಗಪ್ಪ.—ತರಿ ಕಂದಾಯ ಹಾಕುತ್ತೀರಿ, ತರಿ ಕಂದಾಯ ಹಾಕುವ ಜೊತೆಯಲ್ಲಿ ಮತ್ತೆ ನೀರಿನ ಕಂದಾಯ ವಿಧಿಸುತ್ತೀರಿ ಇದು ವಿರೋಧಾಭಾಸವಲ್ಲವೇ ? ಇದನ್ನು ಕೈ ಬಿಡುತ್ತೀರಾ ?

† ಶ್ರೀ ಎಚ್. ಎನ್. ನಂಜೇಗೌಡ.—ವಾಟರ್ ರೇಟ್ ಹಾಕುವುದು ನೀರು ಕೊಡುವ ಕಡೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಲೆನಾಡಿನಲ್ಲಿ 3 ತಿಂಗಳು ನೀರನ್ನು ಕೆರೆಗಳಲ್ಲಿ ಉಪಯೋಗಿಸುತ್ತಾ ಇಲ್ಲ, ಆ ದೃಷ್ಟಿಯಿಂದ ಮಲೆನಾಡು ಪ್ರದೇಶದಲ್ಲಿ ಕರ ತೆಗೆದುಹಾಕುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಬೆಳೆ ಮೇಲೆ ವಾಟರ್ ರೇಟ್ ಹಾಕುವುದು. ಯಾವ ಬೆಳೆ ಬೆಳೆಯುತ್ತಾರೆ ನೋಡಿ ವಾಟರ್ ರೇಟ್ ಹಾಕುತ್ತಾರೆ. ಅನ್ಯಾಯ ಆಗಿದ್ದರೆ 1961 ನೇ ಇನವಿ ಇರಿಗೇಷನ್ ರೂಲ್ಸ್ ಪ್ರಕಾರ ಅಪೀಲ್ ಹಾಕಬಹುದು. ಅದರ ಪ್ರಕಾರ ಕಡಿಮೆ ಮಾಡುವುದಕ್ಕೆ ಆಥವಾ ಕ್ಯಾನ್ಸರ್ ಮಾಡುವುದಕ್ಕೆ ಅವಕಾಶ ಇದೆ. ಇಲ್ಲಿ ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು ಹೇಳಿದರು ಆಫೀರ್ ಹಾಕುವುದಕ್ಕೆ ಬರುತ್ತದೆಂದು. ಹಳ್ಳಿಯವರು ರೂಲ್ಸ್ ಓದುವುದಕ್ಕೆ ಕಷ್ಟವಾಗುತ್ತದೆ. ಬೆಳೆ ಇಟ್ಟಂತ ಕಾಲದಲ್ಲಿ ಪಹಣಿ ಬರೆಯುತ್ತಾರೆ, ಆದರೆ ಕ್ರಾಪ್ ಬರುವುದಿಲ್ಲ. ನಂತರ ಆಫೀರ್ ಹಾಕಿಕೊಂಡು ವ್ಯವಹಾರ ಮಾಡಬೇಕಾಗುತ್ತದೆ. ಈ ಕಾರಣದಿಂದ ಚಿಕ್ಕಚಿಕ್ಕ ಕಟ್ಟೆಗಳ ನೀರಿಗೆ ವಾಟರ್ ರೇಟ್ ಕೈಬಿಡುವುದು ಸೂಕ್ತವಲ್ಲವೇ? ಮೇಜರ್ ಇರಿಗೇಷನ್ ಕಡೆ ಹಾಕಬೇಕಾಗುತ್ತದೆ. ಸಣ್ಣ ಕಟ್ಟೆ ಇದ್ದರೂ ಬೆಳೆ ಬರುತ್ತದೆ. ಆದ್ದರಿಂದ ಸರ್ಕಾರದ ಥೋರಣ್ ಸಣ್ಣಸಣ್ಣ ಕಟ್ಟೆಗಳು ಇರುವ ಕಡೆ ವಾಟರ್ ರೇಟ್ ಹಾಕುವುದನ್ನು ಕೈಬಿಡಬಹುದು ಎಂದು ಯಾಕೆ ಇರಬಾರದು?

ಶ್ರೀ ಡಿ. ದೇವರಾಜ್ ಅರಸ್.—ಸಣ್ಣಸಣ್ಣ ಕಟ್ಟೆಗಳು ಮಲೆನಾಡಿನಲ್ಲಿ ಇವೆ, ಮೈದಾನದಲ್ಲಿ ಇವೆ. 10—15 ಎಕರೆಗೆ ಆಗುವಂತವು ಸಣ್ಣಸಣ್ಣ ಕಟ್ಟೆಗಳು ಇವೆ. ಮತ್ತೆ ಮೈದಾನ ಪ್ರದೇಶಗಳಲ್ಲಿ 15 ಎಕರೆಗಳು ನೀರಾವರಿ ಆಗಬೇಕಾದರೆ, ಮಲೆನಾಡು ಇರುವ ಕಟ್ಟೆ 3-4 ರಷ್ಟು ದೊಡ್ಡದು ಇದ್ದರೆ ಸಾಧ್ಯ. ಮಲೆನಾಡಿನಲ್ಲಿ ನೀರು ಜಾಸ್ತಿ ಸಿಕ್ಕುತ್ತದೆ, ಮಳೆ ಜಾಸ್ತಿ ಬೀಳುತ್ತದೆ. ಚಿಕ್ಕ ಕಟ್ಟೆ ಇದ್ದರೂ ಆದರ ಕೆಳಗಿರತಕ್ಕ ಭೂಮಿಯಲ್ಲಿ ಬೆಳೆ ಬೆಳೆಯುತ್ತದೆ. ಮೈದಾನದಲ್ಲಿ ಒಂದು ಕೆರೆಯಲ್ಲಿ 6—7 ತಿಂಗಳು ನೀರು ಇದ್ದರೆ 15ರಿಂದ 50 ಎಕರೆ ಬೆಳೆ ಮಾಡುವುದಕ್ಕೆ ಸಾಧ್ಯ. ಮಲೆನಾಡಿನಲ್ಲಿ 50 ಎಕರೆ ಬೆಳೆ ಬೆಳೆಯಬೇಕಾದರೆ ಆ ಕಡೆ ಬೇಕಾದಷ್ಟು ಚಿಕ್ಕ ಕಟ್ಟೆ ಇದ್ದರೂ ಮಳೆ ನೀರು ಜಾಗು ನೀರಿಂದ ಬೆಳೆಯಬಹುದು. ರೆವಿನ್ಯೂ ಇಲಾಖೆ ಹುಟ್ಟಿದ ದಿನದಿಂದ ಆದರ ಮೇಲೆ ನೀರು ಕಂದಾಯ ತರಿ ಕಂದಾಯ ಹಾಕತಕ್ಕ ಪ್ರಿನ್ಸಿಪಲ್ ಅಡಾಪ್ಟ್ ಮಾಡಿಕೊಂಡು ಬಂದಿದ್ದಾರೆ. ಹೊಸದಾಗಿ ಮಾಡುತ್ತಾ ಇಲ್ಲ. ತಾವು ಹೇಳತಕ್ಕ ಮಾತನ್ನು 2 ಭಾಗ ಮಾಡಿ ಹೇಳುತ್ತೇನೆ. ನೀರು ಒದಗತಕ್ಕ ಸ್ಥಳಗಳಿಗೆ ಇರಿಗೇಷನ್ ಡ್ಯಾವ ' ಕಟ್ಟಿ ನೀರನ್ನು ಸರಬರಾಜು ಮಾಡುವುದು ಇದೆ. ಇದಲ್ಲದೆ ಸಣ್ಣಪುಟ್ಟ ಕಾಗಳ ಕೆಳಗೆ ಒಳ ಇಡತಕ್ಕ ಜಮೀನುಗಳು ಮಲೆನಾಡಿನಲ್ಲಿ ಇವೆ. ಮಳೆಯಿಂದ ಬೆಳೆಯತಕ್ಕ ಬೆಳೆಗೂ ಆದಕ್ಕೂ ವ್ಯತ್ಯಾಸ ಮಾಡಬೇಕಾಗುತ್ತದೆ. ಎಲ್ಲದಕ್ಕೂ ಕಂದಾಯ ಬಿಟ್ಟುಬಿಡಿ ಎಂದರೆ ಕಷ್ಟವಾಗುತ್ತದೆ. ತಪ್ಪಾಗೆ ಗೊತ್ತು ಯಾವ ಹಂತರ್ಲ್ಲಿ ನೀರನ್ನು ಒದಗಿಸಿಕೊಂಡು ಬಂದಿದ್ದೇವೆ ಎಂಬುದು. ಮಲೆನಾಡಿನಲ್ಲಿ ಇರತಕ್ಕ ತರಿ ಜಮೀನಿನ ಕಂದಾಯಕ್ಕೂ ಮೈದಾನ ಪ್ರದೇಶದಲ್ಲಿರತಕ್ಕ ತರೀ ಜಮೀನಿನ ಕಂದಾಯಕ್ಕೂ ರೇಟ್ ಬೇರೆ ಇದೆ. ಈ ತಾರತಮ್ಯ ಒಪ್ಪಿಕೊಂಡಿದ್ದೇವೆ ಒಂದು ಸಂದರ್ಭದಲ್ಲಿ ಹೈಕೋರ್ಟಿಗೆ ಹೋಗಿ ಸಮಸ್ಯೆಯಲ್ಲಾ ಡಿಸ್ಕ್ರಿಮಿನೇಟ್ ಮಾಡಿದ್ದಾಯಿತು ಎಂದು ಒಂದು ವಿಚಾರದಲ್ಲಿ ಬಂತು. ಅದು ಯಾವುದೋ ಗೊತ್ತಿಲ್ಲ. ಆದರೂ ಈಗ ನಾವು ತಾರತಮ್ಯ ಇಲ್ಲದೆ ಎಲ್ಲಾ ಒಂದೇ ಸಮ ಹಾಕಿದ್ದೇವೆ ಎಂದು ಹೇಳುವುದಾದರೆ ಪುನಃ ಪರಿಶೀಲನೆ ಮಾಡಬೇಕಾದುದು ನ್ಯಾಯ.

ಶ್ರೀ ಜಿ. ಪುಟ್ಟಸ್ವಾಮಿ.—ಮಲೆನಾಡಿಗೆ ವಾಟರ್ ರೇಟನ್ನು ಹಾಕಿರುವುದು ಇತ್ತೀಚೆಗೆ ಅಲ್ಲವೇ?

ಶ್ರೀ ಡಿ. ದೇವರಾಜ್ ಅರಸ್.—ಬೊದಲಿನಿಂದಲೂ ಇದೆ.

Sri B. B. SAYANAK.—In our side the tanks were constructed by the erstwhile States. The Government has not spent any amount over the construction of these tanks. Such being the case, why should the Government levy water rate on tanks in our side?

ಶ್ರೀ ಕೋಣಂದೂರು ಲಿಂಗಪ್ಪ.—ಆದಕ್ಕೆ ಪೂರಕವಾಗಿ ನಮ್ಮ ಮಲೆನಾಡಿನಲ್ಲಿ ಶಿವಪ್ಪ ನಾಯಕನ ಕಾಲದಲ್ಲಿ ಕಟ್ಟಿದ ಕೆರೆಗಳು ಇವೆಯೇ ಹೊರತು, ನಿಮ್ಮ ಸರ್ಕಾರ ಕಟ್ಟಿಸಿದ ಯಾವ ಕೆರೆಗಳೂ ಇಲ್ಲ. ಅಲ್ಲಿಗೆ ನೀವು ಏತಕ್ಕೆ ವಾಟರ್ ರೇಟ್ ಹಾಕುತ್ತೀರಿ.

ಶ್ರೀ ಡಿ. ದೇವರಾಜ್ ಅರಸ್.—ಸರ್ಕಾರ ಎಂದರೆ, ಕಂಟಿನ್ಯುಟಿ ಇದೆ ಎನ್ನುವುದನ್ನು ಮಾನ್ಯ ಸದಸ್ಯರು ಮರೆತಿದ್ದಾರೆ ಎಂದು ಕಾಣುತ್ತದೆ. ಯಾವ ಸರ್ಕಾರ ಮಾಡಿರಲೀ, ಶಿವಪ್ಪ ನಾಯಕನ ಕಾಲದಲ್ಲಿ ಮಾಡಿರಲೀ, ಕಂದಾಯ ಕೊಡಬೇಕಾದದ್ದನ್ನು, ಯಾವ ಸರ್ಕಾರ ಇದ್ದರೂ ಕೊಡಲೇಬೇಕು. ನಾವು ಹಾಕಿರುವ ಕಂದಾಯವನ್ನು ಇನ್ನೊಂದು ಸರ್ಕಾರ ಬಂದು ತೆಗೆಯುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಬಿಡುವುದಾದರೆ ಎಲ್ಲದ್ದಕ್ಕೂ ಬಿಡಬಹುದು. ಆದರೆ ತಾವು ಹೇಳುವ ಕಾರಣದಿಂದ ಕಂದಾಯವನ್ನು ಬಿಡುವುದಕ್ಕಾಗುವುದಿಲ್ಲ.